ಪ್ರತಿಪಾದಿಸಲಾಗುತ್ತಿದೆ. ಬಹುತೇಕ ಹಿರಿಯರು ತಮ್ಮ ಮಾತನ್ನು ಯಾವಾಗ ಮಕ್ಕಳು ಕೇಳುವುದಿಲ್ಲವೋ ಅವನಲ್ಲಿ ಶಿಸ್ತಿಲ್ಲವೆಂದು ತಿಳಿಯುತ್ತಾರೆ.

ಪೋಷಕರು ಮಕ್ಕಳಿಗೆ ಶಿಸ್ತು ಅಗತ್ಯ ಎನುವುದಾದರೆ, ಅದರ ಮಹತ್ವ ಕುರಿತು ಮಕ್ಕಳಿಗೆ ತಿಳಿಹೇಳಬೇಕು. ಮಕ್ಕಳೊಂದಿಗೆ ಮುಕ್ತವಾಗಿ ಪಾಲಕರು ಮಾತಾಡಬೇಕು. ಮನೆಯ ಒಳಗಡೆ ಹಾಗೂ ಹೊರಗಡೆ ಹೇಗಿರಬೇಕು ಎಂಬುದನ್ನು ಚರ್ಚಿಸುತ್ತಾ, ಅವರೇ ತಿರ್ಮಾನ ಕೈಗೊಳ್ಳುವಂತೆ ಮಾಡಿರಿ. ಮಕ್ಕಳು ತಾವೇ ನಿಯಮಗಳನ್ನು ರೂಪಿಸಿದಲ್ಲಿ ಬ್ರೇಕ್ ಮಾಡಲು ಇಷ್ಟಪಡುವುದಿಲ್ಲ. ಅದರ ಬದಲು ನಾವೇ ನಿಯಮಗಳನ್ನು ಸಿದ್ಧಪಡಿಸಿ ಹಾಗಿರಬೇಡ ಹೀಗಿರಬೇಡ ಎಂದು ನಿರ್ಬಂಧ ಹೇರುವುದು ಒಳ್ಳೆಯದಲ್ಲ. ಅಂದರೆ ಅವರೇ ಸ್ವಯಂ ಶಿಸ್ತು ರೂಢಿಸಿಕೊಳ್ಳುವಂತೆ ಮಾಡುವುದು ಸೂಕ್ತ. ಶಿಸ್ತಿನಲ್ಲಿ ಪಾಲಕರ ಪಾತ್ರವೂ ಮಹತ್ವದ್ದಾಗುತ್ತದೆ. ಪಾಲಕರ ಮಾತು ಮತ್ತು ವರ್ತನೆ ಸರಿಯಾಗಿರಬೇಕು ಜೊತೆಗೆ ಗೊಂದಲ ಉಂಟು ಮಾಡಬಾರದು.

## ನನ್ನತನವೇ ಕನ್ನಡತನ

ನನ್ನ ಕನ್ನಡ



**ಇಕ್ಬಾಲ್ ಅಹಮದ್,**
ಕಲಾವಿದ

**ಈ** ನೆಲ, ಜಲ, ಸಂಸ್ಕೃತಿ, ಆಚರಣೆ, ವಿಚಾರ ಎಲ್ಲವನ್ನೂ ಒಳಗೊಂಡಿರುವುದೇ ಕನ್ನಡ. ಕಲೆ, ಚಿತ್ರಕಲೆ, ಅಭಿನಯ, ಸಂಭಾಷಣೆ ಎಲ್ಲವೂ. ನನ್ನ ವ್ಯಕ್ತಿತ್ವವೇ ಕನ್ನಡಮಯ. ನಾನು ಹುಟ್ಟಿ, ಬೆಳೆದಿದ್ದೆಲ್ಲವೂ ಕರ್ನಾಟಕದಲ್ಲಿ ಆಗಿರುವುದರಿಂದ ಕನ್ನಡತನ ಅಂದರೆ ಅದು ನನ್ನತನ. ಇಂಗ್ಲಿಷ್ ಜೊತೆಗೆ ಇತರೆ ಪ್ರಾದೇಶಿಕ ಭಾಷೆಗಳ ಜತೆಗಿನ ಒಡನಾಟವನ್ನು ಇಟ್ಟುಕೊಂಡೇ ಹೊಸದೊಂದು ಸೃಜನಶೀಲ ಅಭಿವ್ಯಕ್ತಿಯನ್ನು ರೂಪಿಸಿಕೊಳ್ಳುತ್ತೇವಲ್ಲ, ಅದು ಕನ್ನಡತನ.

ಯಾವುದೇ ವೃತ್ತಿ ಇರಬಹುದು. ಕನ್ನಡ ಮನಸ್ಸಿನ ಭಾಷೆಯಾಗಿ ಉಳಿಯಬೇಕು. ಆರಂಭದಲ್ಲಿ ಇಂಗ್ಲಿಷ್‌ನಿಂದಾಗಿ ತುಸು ಕೀಳರಿಮೆ ಇದ್ದಿದ್ದು ಹೌದು. ಇಂಗ್ಲಿಷ್ ಬಂದ್ರೆ ಬುದ್ಧಿವಂತ. ಇಲ್ಲವಾದರೆ ತಿಳಿವಳಿಕೆ ಕಡಿಮೆ ಎಂಬ ಭಾವವಿತ್ತು. ಅದು ಈಗ ಹಾಗಿಲ್ಲ. ಇಂಗ್ಲಿಷ್ ಅನ್ನು ಜೀರ್ಣಿಸಿಕೊಳ್ಳುವಷ್ಟು ತಂತ್ರಜ್ಞಾನ ಬೆಳೆದಿದೆ. ಈಗ ಮನಸ್ಸಿನ ಭಾಷೆಯಲ್ಲಿಯೇ ಸೃಜನಶೀಲತೆಯನ್ನು ಕಟ್ಟಬೇಕು. ಆಗ ಮಾತ್ರ ಅದು ಇನ್ನೊಬ್ಬರನ್ನು ಮುಟ್ಟುತ್ತದೆ.

### ಶಿಕ್ಷೆ ಮತ್ತು ಪುರಸ್ಕಾರ

ಮಗುವಿಗೆ ಏನು ಮಾಡಬೇಕು ಏನು ಮಾಡಬಾರದು ಎಂಬುದನ್ನು ಮೊದಲೇ ತಿಳಿಸಿಬಿಡಿ. ಇದರಿಂದ ಶಿಕ್ಷೆಯನ್ನು ದೂರ ಮಾಡಬಹುದು. ನಿತ್ಯ ಹಲ್ಲು ತಿಕ್ಕುವುದು ಅನಿವಾರ್ಯ, ಯಾಕೆ ಅನಿವಾರ್ಯ? ಎಂಬುದನ್ನು ಮಗುವಿಗೆ ತಿಳಿಸಿ ಮನದಟ್ಟು ಮಾಡಿ ನೋಡಿ. ಆಗ ಆಗುವ ಬದಲಾವಣೆಯೇ ಬೇರೆ. ಅದರ ಬದಲು ಮಗುವಿಗೆ ಶಿಕ್ಷೆ ಕೊಟ್ಟಷ್ಟು ಮಗುವನ್ನು ಶಿಸ್ತುಕಲಿಯುತ್ತದೆ ಎಂಬುದು ಬಹುತೇಕ ಪಾಲಕರ ನಂಬಿಕೆ. ಒಂದು ವೇಳೆ ಮಗುವಿಗೆ ಪ್ರತಿ ವಿಷಯಕ್ಕೂ ಗದರಿಸಿ ಶಿಕ್ಷೆ ಕೊಡುತ್ತಿದ್ದರೆ ಮಗುವಿಗೆ ಅದೇ ಅಭ್ಯಾಸವಾಗುತ್ತದೆ. ಆಗ ಮಗುವಿನ ತಪ್ಪು ವರ್ತನೆಗೆ ಮೊದಲಿಗಿಂತ ಹೆಚ್ಚು ಶಿಕ್ಷೆ ವಿಧಿಸಬೇಕಾಗುತ್ತದೆ. ಹೀಗೆ ದಿನೇ ದಿನ ಶಿಕ್ಷೆ ಹೆಚ್ಚಾಗುತ್ತಾ ಹೋದರೇ?

### ದೂರ-ದರ್ಶನ!

ಮನೆಯಲ್ಲಿ ಪಾಲಕರು ಮತ್ತು ಮಕ್ಕಳ ನಡುವಿನ ಆತ್ಮೀಯತೆ ಕಡಿಮೆಯಾಗಲು ದೂರದರ್ಶನ ಕೊಡುಗೆ ಸಾಕಷ್ಟಿದೆ. ಪಾಲಕರು ಅದಕ್ಕೆ ದಾಸರಾಗಿರುವುದರಿಂದ ತಾಳ್ಮೆ, ಮೌಲ್ಯ, ಸಂಬಂಧಗಳು ಕಾಣೆಯಾಗುತ್ತಿವೆ. ಅದರಲ್ಲಿನ ಸುಳ್ಳು ಜಾಹಿರಾತುಗಳು ಮಕ್ಕಳ ಸುಂದರ ಭವಿಷ್ಯವನ್ನು ಹಾಳು ಮಾಡುತ್ತಿರುವುದನ್ನು ಯಾರೂ ಗಂಭೀರವಾಗಿ ಪರಿಗಣಿಸದಿರುವುದರಿಂದ ನಮ್ಮ ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತವನ್ನು ಕಾಣುವಂತಾಗಿದೆ.

ನಮ್ಮ ಪಾಲಕರು ಮಗುವಿನ ವರ್ತನೆ ತಮಗೆ ಇಷ್ಟವಾಗದಿದ್ದ ಸಮಯದಲ್ಲೂ, ಮಗು ನಮಗೆ ಇಷ್ಟ ಎಂಬುದನ್ನು ಮಗುವಿಗೆ ಮನದಟ್ಟು ಮಾಡಿಕೊಡಬೇಕು.ಅತೀ ಶಿಸ್ತಿಗೆ ಒಳಪಡಿಸಿದಾಗ ಮಗುವು ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಒದ್ದಾಡಲಾರಂಭಿಸುತ್ತದೆ.ಇದಕ್ಕೆ ಪರಿಹಾರವಾಗಿ ಮಗು ತನ್ನ ಹೆಬ್ಬೆರಳು ಚೀಪುವುದು, ನೆಲದ ಮೇಲೆ ಹೊರಳಾಡುವುದು, ತಲೆಚಚ್ಚಿಕೊಳ್ಳುವುದು, ಹಲ್ಲು ಕಡಿಯುವುದು, ಉಗುರು ಕಡಿಯುವುದು, ಹೆಚ್ಚಿನ ಹಸಿವು, ಮುಂಗೋಪಿ ಸ್ವಭಾವ ಅಥವಾ ಆಕ್ರಮಣ ಮನೋಭಾವ, ಸಿಟ್ಟುಸೆಡವು, ಸುಳ್ಳು ಹೇಳುವುದು, ಭಯ, ದ್ವೇಷ, ಹೊಟ್ಟೆಕಿಚ್ಚು, ಸೇಡಿನ ಮನೋಭಾವ, ಒಡೆದು ಹಾಳು ಮಾಡುವುದು, ನಾಚಿಕೆ, ಪುಕ್ಕಲು ಹೀಗೆ ಒಂದಲ್ಲಾ ಒಂದು ಸಮಸ್ಯೆಗೆ ಮಗು ಒಳಗಾಗಿ ಬೆಳವಣಿಗೆ ಕುಂಠಿತವಾಗುತ್ತದೆ. ಹಾಗಾಗಿ ಮಕ್ಕಳು ತಪ್ಪು ಮಾಡಿದಾಗ ಪೋಷಕರು ಪ್ರೀತಿಯಿಂದ ತಿಳಿ ಹೇಳಬೇಕು. ಪ್ರೀತಿಯಿಂದ ಅತ್ಯಂತ ಕ್ರೂರಿಯಾದ ಅಂಗುಲಿಮಾಲನನ್ನೇ ಬುದ್ಧ ಬದಲಾಯಿಸಿದ. ಅಂದ ಮೇಲೆ ನಮ್ಮ ಮಕ್ಕಳು ಅವನಿಗಿಂತ ಹೆಚ್ಚಿನ ಕ್ರೂರಿಗಳಲ್ಲ ಎಂಬುದು ಪೋಷಕರು ಅರ್ಥ ಮಾಡಿಕೊಂಡರೆ ಸಾಕು.

ಶ್ಲಾಘನೆ, ಅಭಿನಂದನೆಗಳು ಎಲ್ಲರನ್ನೂ ಹಿಗ್ಗಿಸುತ್ತವೆ. ನಮ್ಮ ಸಾಮರ್ಥ್ಯದ ಪೂರ್ಣ ಬಳಕೆಯಾಗುವಂತೆ ಮಾಡುತ್ತವೆ. ಮಾನಸಿಕವಾಗಿ ಕುಗ್ಗಿಹೋದ ವ್ಯಕ್ತಿಯ ನಡವಳಿಕೆಯಲ್ಲಿ ಸೋಲಿನ ಗುಣಗಳು ಎದ್ದು ಕಾಣುತ್ತವೆ. ಸದಾ ತೆಗಳಿಕೆಗೆ ಗುರಿಯಾದ ವ್ಯಕ್ತಿಯು ದುರಂತ ಜೀವಿಯಾಗಿ ಪರಿಣಮಿಸಿರುವ ಸಾಧ್ಯತೆ ಜಾಸ್ತಿ. ಆದ್ದರಿಂದ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರು, ಹಿರಿಯರು ಅವರ ಕೆಲಸ ಕಾರ್ಯಗಳಿಗೆ ಸದಾ ಮೆಚ್ಚುಗೆ ವ್ಯಕ್ತಪಡಿಸುತ್ತಲೇ ಇರಬೇಕು. ಪದೇ ಪದೇ ಮೆಚ್ಚುಗೆಯ ಅಭಿನಂದನೆಗಳು ಮಗುವನ್ನು ಶ್ರೇಷ್ಠ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ. ಮಗು ಶ್ರೇಷ್ಠ ವ್ಯಕ್ತಿಯಾಗಿ ರೂಪುಗೊಳ್ಳಲು ಪೋಷಕರು ಸಾಕಷ್ಟು ಶ್ರಮ ಮತ್ತು ಪೂರಕ ಪರಿಸರವನ್ನು ನಿರ್ಮಿಸಬೇಕು.

### ಸಮಯ

ಮಕ್ಕಳಿಗೆ ಎಷ್ಟು ಸಮಯವನ್ನು ನಾವು ನೀಡುತ್ತಿದ್ದೇವೆ?. ಎಷ್ಟು ಬಾರಿ ನಗುನಗುತ ಮಾತನಾಡಿದ್ದೀರಿ ಅಥವಾ ಸಿಡುಕಿದ್ದೀರಿ?. ಎಷ್ಟು ಬಾರಿ ಗೌರವಿಸಿ ಮಾತನಾಡಿದ್ದೀರಿ ಅಥವಾ ಅವಹೇಳನ ಮಾಡಿದ್ದೀರಿ?. ಎಷ್ಟು ಬಾರಿ ಟಿ.ವಿ.ಯನ್ನು ಆಫ್ ಮಾಡಿ ಮಕ್ಕಳ ಮಾತನ್ನು ಆಲಿಸಿದ್ದೀರಿ?. ಮಕ್ಕಳ ಪ್ರಶ್ನೆಗೆ ಎಷ್ಟು ಬಾರಿ ಉತ್ತರಿಸಿದ್ದೀರಿ ಅಥವಾ ಬೈದು ಬಾಯಿ ಮುಚ್ಚಿಸಿದ್ದೀರಿ?. ಎಷ್ಟು ಬಾರಿ ಪ್ರೀತಿಯಿಂದ ಆಲಂಗಿಸಿಕೊಂಡು ಮಾತನಾಡಿದ್ದೀರಿ ಅಥವಾ ಕೈಯಿಂದ, ಕೋಲಿನಿಂದ ಹೊಡೆದಿದ್ದೀರಿ?. ಎಷ್ಟು ಬಾರಿ ಮಗುವಿನ ಭಾವನೆಗಳನ್ನು, ದೂರುಗಳನ್ನು ಸಹಾನುಭೂತಿಯಿಂದ ಆಲಿಸಿದ್ದೀರಿ?. ಶಾಲೆಯಲ್ಲಿ ಮಗುವಿಗೆ ಇರಬಹುದಾದ ಸಮಸ್ಯೆಗಳನ್ನು ಕೇಳಿ ತಿಳಿದುಕೊಂಡು ಶಾಲಾ ಅಧ್ಯಾಪಕರನ್ನು ಭೇಟಿಯಾಗಿದ್ದೀರಿ?. ಮಕ್ಕಳ ಇಷ್ಟಅನಿಷ್ಟಗಳಿಗೆ ಕೃತಿಯ ಮೂಲಕ ಬೆಲೆ ನೀಡಿದ್ದೀರಾ?. ಮಗುವಿನ ಸಾಧನೆಗಳನ್ನು ಮುಕ್ತ ಕಂಠದಿಂದ ಹೊಗಳಿದ್ದೀರಾ, ಉತ್ತೇಜನ ಕೊಟ್ಟಿದ್ದೀರಾ?. ಮಗುವಿನ ಸ್ವಾತಂತ್ರ್ಯವನ್ನು ಗೌರವಿಸಿದ್ದೀರಾ?. ಎಂದು ಪಾಲಕರು ತಮ್ಮನ್ನು ತಾವೇ ಪ್ರಶ್ನೆ ಹಾಕಿಕೊಂಡರೆ ತಮ್ಮ ಮಗುವನ್ನು ಯಾವ ರೀತಿ ಕಾಣುತ್ತಿದ್ದಾರೆ ಎಂಬುದು ಅವರಿಗೆ ಸ್ಪಷ್ಟವಾಗುತ್ತದೆ. ಬಹುತೇಕ ಪಾಲಕರು ತಮ್ಮ ಮಗುವಿಗೂ ಮನಸಿದೆ. ಭಾವನೆಗಳನ್ನು ಗ್ರಹಿಸುತ್ತದೆ. ಅವರಲ್ಲೂ ಕನಸುಗಳಿವೆ. ಮಗು ಯಂತ್ರ ಮಾನವ ಅಲ್ಲ. ಜೀವಂತವಿರುವ ನಮ್ಮ ಪ್ರತಿರೂಪ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲದಿರುವುದು ದುರಂತ. ■